2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 148/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕುಮಾರಪ್ಪ | ಪಿಡಬ್ಲೂ -2 |
| ತಂದೆಯ ಹೆಸರು | - | ದೊಡ್ಡಯ್ಯ | ಸಿಡಬ್ಲೂ -2 |
| ವಯಸ್ಸು | - | 51 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಅರಬಲಗೊಲ್ಲರಹಟ್ಟಿ | |

ದಿನಾಂಕಃ 12-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. 1 ನೇ ಆರೋಪಿ ಸಂಬಂಧದಲ್ಲಿ ನನಗೆ ಚಿಕ್ಕಪ್ಪನಾಗಬೇಕು. 3 ನೇ ಆರೋಪಿ 1 ನೇ ಆರೋಪಿಯ ಹೆಂಡತಿ ಮತ್ತು 2 ನೇ ಆರೋಪಿ ಅವರ ಮಗ. ಅರಬಲಗೊಲ್ಲರಹಟ್ಟಿ ಗ್ರಾಮದಲ್ಲಿ ನಮ್ಮ ಮನೆಯ ಪಕ್ಕದಲ್ಲಿ ಆರೋಪಿತರ ಮನೆ ಇದೆ.

2. ನಮ್ಮ ಮನೆಯ ಗೋಡೆಯ ಪಕ್ಕದಲ್ಲಿ ಆರೋಪಿತರು ಕುರಿ ಸಗಣಿಯನ್ನು ಹಾಕುತ್ತಿದ್ದರು. ಅದರಿಂದ ನಮ್ಮ ಮನೆಯ ಗೋಡೆ ಹಾಳಾಗಿ ಬೀಳುತ್ತಿತ್ತು. ಹಾಗಾಗಿ ನಾನು ಆರೋಪಿತರಿಗೆ ಅಲ್ಲಿ ಸಗಣಿಯನ್ನು ಹಾಕಬೇಡಿ ಎಂದು ಹೇಳಿದ್ದೆನು.

3. ಈಗ್ಗೆ 3 ವರ್ಷಗಳ ಹಿಂದೆ ಒಂದು ದಿನ ನಾನು ಮತ್ತು ನನ್ನ ಹೆಂಡತಿ ನಮ್ಮ ಮನೆಯಲ್ಲಿ ಇದ್ದೆವು. ಆರೋಪಿತರು ಗೊಬ್ಬರವನ್ನು ಯಾರಿಗೋ ಕೊಟ್ಟಿದ್ದರು ಹಾಗಾಗಿ ಸದರಿಯವರು ಗೊಬ್ಬರವನ್ನು ಹೇರಿಕೊಂಡು ಹೋಗಲು

ಟ್ರಾಕ್ಟರ್ ಅನ್ನು ತಂದಿದ್ದರು. ಆಗ ಆರೋಪಿತರು ಮತ್ತು ಕೆಲಸದವರು ಸೇರಿಕೊಂಡು ಟ್ರಾಕ್ಟರ್ ಗೆ ಗೊಬ್ಬರವನ್ನು ತುಂಬಿಸುತ್ತಿದ್ದರು. ಆ ಸಮಯದಲ್ಲಿ ಆರೋಪಿತರು ಕಸವನ್ನು ನಮ್ಮ ಗೋಡೆಯ ಕಡೆಗೆ ದೂಕುತ್ತಿದ್ದರು. ಆಗ ನಾನು ಮತ್ತು ನನ್ನ ಹೆಂಡತಿ ಗೌರಮ್ಮ 1 ನೇ ಆರೋಪಿ ಕರಿಯಪ್ಪನಿಗೆ ಆ ರೀತಿ ಕಸವನ್ನು ಗೋಡೆಯ ಕಡೆಗೆ ದೂಕಬೇಡಿ ಎಂದು ಹೇಳಿದೆವು. ಆಗ 2 ನೇ ಆರೋಪಿ ಮಂಜುನಾಥ ದೊಣ್ಣೆಯಿಂದ ನನ್ನ ಹೆಂಡತಿಯ ತಲೆಯ ಎಡಭಾಗಕ್ಕೆ ಹೊಡೆದನು. ಆಗ ಆಕೆಗೆ ಗಾಯವಾಗಿ ರಕ್ತ ಬಂದಿತು. 3 ನೇ ಆರೋಪಿ ಗೀತಮ್ಮ ಬಿದಿರು ಕೋಲಿನಿಂದ ನನ್ನ ಎಡಭಾಗದ ಕತ್ತಿಗೆಯ ಕೆಳಗೆ ಭುಜಕ್ಕೆ ಹೊಡೆದಳು. 1 ಮತ್ತು 2 ನೇ ಆರೋಪಿತರು ನನ್ನ ಹೆಂಡತಿಯನ್ನು ಕುರಿತು ಕೆಟ್ಟ ಮಾತುಗಳಿಂದ ಬೈದರು.

4. 1 ನೇ ಆರೋಪಿ ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಹಿಡಿದು ಎಳೆದಾಡಿದನು. ಅಷ್ಟರಲ್ಲಿ ಚಾಸಾ.3 ಕಾಂತರಾಜ ಮತ್ತು ಚಾಸಾ.4 ಚಂದ್ರಪ್ಪರವರು ಬಂದು ಗಲಾಟೆಯನ್ನು ಬಿಡಿಸಿದರು. ನಂತರ ನಮ್ಮ ಸಂಬಂಧಿಕರಾದ ಚಾಸಾ.5 ಶ್ರೀಧರ್ ರವರು ಬಂದು ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಬೈಕಿನಲ್ಲಿ ಕರೆದುಕೊಂಡು ಹೋದರು. ಸದರಿ ಆಸ್ಪತ್ರೆಗೆ ಪೊಲೀಸರು ಬಂದಿದ್ದರು. ಆಗ ನನ್ನ ಹೆಂಡತಿ ಅಲ್ಲಿಯೇ ಪೊಲೀಸರಿಗೆ ಘಟನೆಯ ಬಗ್ಗೆ ದೂರನ್ನು ಕೊಟ್ಟಳು.

5. ಮಾರನೇ ದಿನ ಆಸ್ಪತ್ರೆಯಿಂದ ಪೊಲೀಸರು ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಘಟನಾ ಸ್ಥಳಕ್ಕೆ ಮಹಜರ್ ಮಾಡಲು ಕರೆದುಕೊಂಡು ಹೋದರು. ಅಲ್ಲಿ ಪೊಲೀಸರು ಮಹಜರನ್ನು

ಮಾಡಿಕೊಂಡು ಫೋಟೋವನ್ನು ತೆಗೆದುಕೊಂಡರು.

6. ಸಾಕ್ಷಿಗೆ ಈಗಾಗಲೇ ನಿಪಿ.3 ಎಂದು ಗುರುತಿಸಲ್ಪಟ್ಟಿರುವ ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಸದರಿ ಫೋಟೋವನ್ನು ಗಲಾಟೆ ನಡೆದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡುವಾಗ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ.

7. ಗಲಾಟೆಯಾದಾಗ ನನ್ನ ಹೆಂಡತಿ ಗೌರಮ್ಮ ಸೀರೆ ಮತ್ತು ಒಳಲಂಗವನ್ನು ಧರಿಸಿದ್ದಳು, ಅದಕ್ಕೆ ರಕ್ತದ ಕಲೆಗಳು ಆಗಿದ್ದವು. ಅವುಗಳನ್ನು ಮಹಜರ್ ಸಮಯದಲ್ಲಿ ನನ್ನ ಹೆಂಡತಿ ಪೊಲೀಸರಿಗೆ ಕೊಟ್ಟಳು.  ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.  ಸಾಕ್ಷಿಯು ಈಗಾಗಲೇ ಮು.ಮಾ.3 ಮತ್ತು ಮು.ಮಾ.4 ಎಂದು ಗುರುತಿಸಲ್ಪಟ್ಟಿರುವ ಬಟ್ಟೆಗಳನ್ನು ಗುರುತಿಸಿ ಅವುಗಳನ್ನು ತನ್ನ ಹೆಂಡತಿ ಗಲಾಟೆಯಾದ ಸಮಯದಲ್ಲಿ ಧರಿಸಿದ್ದಾಗಿ ನುಡಿದಿರುತ್ತಾರೆ.

8. 2 ನೇ ಆರೋಪಿ ನನ್ನ ಹೆಂಡತಿಗೆ ಹೊಡೆದ ದೊಣ್ಣೆ ಮತ್ತು 3 ನೇ ಆರೋಪಿ ನನಗೆ ಹೊಡೆದ ಬಿದಿರಿನ ಕೋಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.5 ಎಂದು ಗುರುತಿಸಲ್ಪಟ್ಟಿರುವ ದೊಣ್ಣೆ ಮತ್ತು ಮು.ಮಾ.6 ಎಂದು ಗುರುತಿಲ್ಪಟ್ಟಿರುವ ಬಿದಿರು ಕೋಲನ್ನು ನೋಡಿ ಗುರುತಿಸಿ 2 ಮತ್ತು 3 ನೇ ಆರೋಪಿತರು ನನಗೆ ಮತ್ತು ಹೆಂಡತಿಗೆ ಹೊಡೆದ ದೊಣ್ಣೆ ಮತ್ತು ಕೋಲು ಅದೇ ಎಂದು ನುಡಿದಿರುತ್ತಾರೆ. ಗಲಾಟೆಯ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿದರು ಆಗ ನಾನು ಅವರಿಗೆ ನಡೆದ ವಿಚಾರವನ್ನು ತಿಳಿಸಿದ್ದೇನೆ.

(ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.